೫.೧. ಆ ಚೈತ್ಯಾಲಯದ ಪುರ್ಬ್ಬಾವತಾರ ಮೆಂತೆಂದೊಡೆ–

ಶ್ರೀವಸುದೇಶನ ಬಾವಂ
ರೇವಕ ನಿರ್ಮ್ಮಡಿಯ ವಲ್ಲಭಂ ಬೂತುಗನಾ
ತ್ಮಾವಗತಸಕಳ ಶಾಸ್ತ್ರನಿ
ಳಾವಿಶ್ರುತ ಕೀರ್ತ್ತಿ ಗಂಗಮಣ್ಡಲನಾಥ (೦) ||

(ಉತ್ಪಲ ಮಾಲೆ) ರೂಡಿಗೆ ರೂಡಿ ವೆತ್ತೆಸೆದ ಬೆಳ್ವಲ ದೇಶಮನಾಳ್ದ ಗಂಗಪೆ
ರ್ಮ್ಮಾಡಿಗಳಿಂದ ಮಣ್ಣೆಗೆಱೆ ನಾಳ್ಕೆಱೆ ವಟ್ಟೆನಿಸಿತ್ತು ನಾಡನಾ
ಡಾಡಿ ಗಳುಂಬಮೆಂಬಿನೆಗಮಾ ಪುರದೊಳು ಜಯದುತ್ತರಂಗ ಪೆ
ರ್ಮ್ಮಾಡಿಯಿನಾಯ್ತು ಬೂತುಗನರೇನ್ದ್ರನಿನಲ್ಲಿ ಜಿನೇಂದ್ರ ಮಂದಿರಂ ||

ಇಲ್ಲಿ ವಸುಧೇಶನೆಂದರೆ ರಾಷ್ಟ್ರಕೂಟರ ಚಕ್ರವರ್ತಿ ಕೃಷ್ಣ ೧೧೧ (೯೩೯–೬೭), ಆತನ ಬಾವನೆಂದರೆ ಬೂತುಗ ೧೧ (೯೩೮–೬೧) ವಾಸ್ತವವಾಗಿ ಶಾಸನದಲ್ಲಿ ಅನ್ವಯದೋಷ ಬಂದಿದೆ. ಚಾಳುಕ್ಯರ ವಿಚಾರ ಹೇಳುತ್ತ ಇದ್ದಕ್ಕಿದ್ದ ಹಾಗೆ ವಸುಧೇಶ ಎಂಬ ಶಬ್ದ ಬಳಕೆಯಾದರೆ, ಅದರ ಅರ್ಥಾನ್ವಯವು ಚಾಳುಕ್ಯ ಮಹಾರಾಜರಿಗೇ ಆಗುವುದು ಸಹಜ ಹಾಗೂ ನಿರೀಕ್ಷಿತ. ಆದರೆ ರೇವಕ ನಿರ್ಮಡಿಯ ವಲ್ಲಭನಾದ ಬೂತುಗ ಎಂದು ಮುಂದುವರಿದ ಹೇಳಿಕೆಯಿಂದಾಗಿ ವಸುಧೇಶ ಶಬ್ದದ ಅರ್ಥ ಮತ್ತು ವ್ಯಕ್ತಿ ನಿರ್ದೇಶನ ಗಮ್ಯವಾಗುತ್ತದೆ. ರೇವಕನಿಮ್ಮಡಿಯು ರಟ್ಟರ ಮುಮ್ಮಡಿ ಕೃಷ್ಣನ ಅಕ್ಕ. ಈ ಇಮ್ಮಡಿರೇವಕೆಯ ಗಂಡ ಗಂಗರ ಇಮ್ಮಡಿ ಬೂತುಗ. ಈತರು ಎಲ್ಲ ಶಾಸ್ತ್ರಗಳನ್ನೂ ಪರಿಣತಿಯಿಂದ ತನ್ನದನ್ನಾಗಿಸಿದ್ದನು, ಅದರಿಂದಾಗಿ ಇವನಿಗೆ ದೊಡ್ಡಹೆಸರು. ಬೆಳ್ವಲದೇಶವು ಹೆಸರುವಾಸಿಯಾಗಿತ್ತು. ಅದನ್ನು ಮೊದಲಿನಿಂದಲೂ ಆಳುತ್ತ ಬಂದವರು ಗಂಗರು. ಬೆಳ್ವಲ

ಮೂನೂಱು ಮತ್ತು ಪುಲಿಗೆಱೆ ಮೂನೂಱು ಸೇರಿ ಆದ ಎರಡಱುನೂಱು ಪ್ರದೇಶವು ನೂರಾರು ವರ್ಷಗಳ ಕಾಲ ಜೈನರಾದ  ಗಂಗರ, ಸಗರ ಮಣಲೆರರು ಆಡಳಿತದಲ್ಲಿತ್ತು [ನಾಗರಾಜಯ್ಯ, ಹಂಪ, ಶಾಸನಗಳಲ್ಲಿ ಎರಡು ವಂಶಗಳು: ೧೯೫:೪೯ ರಿಂದ ೭೬].  ಬೆಳ್ವಲದೇಶವು ಗಂಗ ಪೆರ್ಮಾಡಿಗಳಿಂದ ಅಣ್ಣಿಗೆಱೆಯು ಇಡೀ ನಾಡಿಗೆ ಮೂಲಸ್ಥಾನವೆನಿಸಿತ್ತು. ಸಾಮಾನ್ಯ ಜನಕ್ಕೆ ಅಸಾಧ್ಯವಾಗಿದ್ದ ಆ ಅಣ್ಣಿಗೆರೆ ಪುರುದಲ್ಲಿ 'ಜಯದುತ್ತರಂಗ ಪೆರ್ಮಾಡಿ' ಬಿರುದಿನ ಬೂತುಗ ನರೇಂದ್ರನಿಂದ ಒಂದು ಜಿನಮಂದಿರ ನಿರ್ಮಾಣವಾಯಿತು.  ಜಯದತ್ತ ರಂಗ ಎಂಬುದು ಪ್ರಶಸ್ತಿ [ಸೌ.ಇ.ಇ. ೨೦. ೩೫. ೧೦೫೫]. ಇಂತಹ ಪ್ರಸಿದ್ಧವಾದ ಜಿನಮಂದಿರ ವನ್ನು ರಾಷ್ಟ್ರಕೂಟರ ಆಡಳಿತಾವಧಿಯಲ್ಲಿ ಈ ಅಣ್ಣಿಗೆರೆಯಲ್ಲಿ ಬೂತಗನಿಮ್ಮಡಿಯ ಮಾಡಿಸಿದನು.  ಅದಕ್ಕೆ ಕೆಲವು ಗ್ರಾಮಗಳನ್ನು ದತ್ತಿಯಾಗಿ ಒಪ್ಪಿಸಿದನು:

ಉದಿತೋದಿತಮೆನೆ ವಿಭವಾ
ಸ್ಪದಮೆನೆ ಭುವನಯ್ಕವಂದ್ಯಯೆನೆ ಸಂಚಳಮಾ
ಗದೆ ಗಂಗಾನ್ವಯಮುಳ್ಳಿನ
ಮಿದು ಸರ್ವ್ವನಮಸ್ಯವಾಗಿ ನಡಯುತ್ತಮಿರಲ್ ||

ಗಂಗರು ಕೊಟ್ಟ ಕೊಡೆಗೆಗಳು ಗಂಗರ ವಂಶಪರ್ಯಂತ ಅವಿಚ್ಛಿನ್ನವಾಗಿಯೇ ಮುಂದುವರಿಯಿತು ಎಂದು ಹೇಳಿದ ಮೇಲೆ (೧೯–೨೧) ಶಾಸನಕವಿ, ಆ ಅಣ್ಣಿಗೆರೆ ದೇವಾಲಯದ ಆಚಾರ್ಯರು ಬಳೆಗಾಱ ಗುಂಪಿಗೆ ಸೇರಿದವರೆಂದು ಅವರಗುರು ಪರಂಪರೆಯನ್ನು ಪರಿಚಯಿಸಿದ್ದಾನೆ (೨೨–೨೭).

೫.೨. ತರುವಾಯ ಶಾಸನಕವಿ, ರಾಷ್ಟ್ರಕೂಟ–ಗಂಗರ ವಿಚಾರವನ್ನು ಅಲ್ಲಿಗೆ ನಿಲ್ಲಿಸಿ, ಮತ್ತೆ ಕಲ್ಯಾಣಚಾಳುಕ್ಯರ ವಿಚಾರಕ್ಕೆ ಬರುತ್ತಾನೆ.  ರಾಜಕೀಯದೊಂದಿಗೆ ಧಾರ್ಮಿಕ ಕಾರಣಗಳೂ

ಕೂಡಿಕೊಂಡಿದ್ದುದರಿಂದ, ಚೋಳರೂ–ಚಾಳುಕ್ಯರೂ ಹಗೆತನ ದಿಂದ ಕಾಳೆಗಕಳದಲ್ಲಿಯೇ ಸಂಧಿಸುತ್ತಿದ್ದುದು. ತ್ರೈಲೋಕ್ಯಮಲ್ಲದೇವನಿಗೂ ಚೋಳರಿಗೂ ಯುದ್ಧಗಳಾದುವು: (ಮತ್ತೇಭವಿಕ್ರೀಡಿತ ವೃತ್ತ)–

ಪೊಲೆಚೋಳಂ ನೆಲೆಗೆತ್ತು ತನ್ನ ಕುಳಧರ್ಮಾಚಾರಮಂ ಬಿಟ್ಟು ಬೆ
ಳ್ವಲ ದೇಶಕ್ಕಡಿಯಿಟ್ಟು ದೇವಗೃಹ ಸಂದೋಹಂಗಳಂ ಸುಟ್ಟುಕ
ಯ್ಯಲೆ ಪಾಪಂ ಬೆಳೆದತ್ತೆನಲ್ಕೆ ಧುರದೊಳು ತ್ರೈಲೋಕ್ಯಮಲ್ಲಂಗೆ ಪಂ
ದಲೆಯಂ ಕೊಟ್ಟಸುವಂ ಬಿಸುಟ್ಟು ನಿಜವಂಶೋಚ್ಚಿತ್ತಿಯಂ ಮಾಡಿದ (೦) ||

ಶ್ರೀಪೆರ್ಮಾನಡಿ ಮಾಡಿಸಿ
ದೀಪರಮ ಜಿನಾಲಯಂಗಳಂ ಪೊಲೆವಟ್ಟಿ
ದ್ರಾವಿಪಾಣ್ಡ್ಯಚೋಳನೆಂಬ ಮ
ಹಾಪಾತಕ ತಿವುಳ ನಳಿದಧೋಗತಿಗಿಳಿದ (೦) ||

ಚೋಳರಾಜನಾದ ಕೋ–ಪರಕೇಸರಿ ರಾಜೇಂದ್ರ ಚೋಳನು ಈ ಬೆಳ್ವಲ ನಾಡಿಗೆ ಅಡಿಯಿಟ್ಟು ದೇವಾಲಯಗಳನ್ನು ಸುಟ್ಟನು. ಕೇವಲ ಜೈನಗುಡಿಗಳನ್ನಷ್ಟೇ ಅಲ್ಲ, ಹಿಂದೂ ಪೂಜಾಸ್ಥಳಗಳನ್ನೂ ಚೋಳರು ಕೆಡವಿದರು, ಸುಟ್ಟರು ಇಲ್ಲವೇ ಅಪವಿತ್ರ ಗೊಳಿಸಿದರು. ಕೊಲ್ಲಾಪುರ ಮಹಾಲಕ್ಷ್ಮೀ ದೇವಾಲಯವನ್ನೂ ಈ ಚೋಳರು ಸೂರೆಮಾಡಿದರು. ಕೊಲ್ಲಾಪುರದ ಬಳಿಯ ಕುಪ್ಪಗ್ರಾಮದಲ್ಲಿ ದೊಡ್ಡಯುದ್ಧ ನಡೆಯಿತು. ಈ ಕುಪ್ಪಂ ಎಂಬುದು ಕೊಪ್ಪಳವೆಂಬ ಅಭಿಪ್ರಾಯವಿದೆ. ಆದರೆ ಕೊಲ್ಲಾಪುರ ಹತ್ತಿರದ ಕುಪ್ಪ ಗ್ರಾಮದಲ್ಲಿ ಕುಪ್ಪೇಶ್ವರ ದೇವಾಲಯ ಮತ್ತು ಶಾಸನ ಸಿಕ್ಕಿರುವುದರಿಂದ ಇದೇ ಕಾಳೆಗಳದ ಕಣವಾಗಿದ್ದ ಕುಪ್ಪಂ ಎಂದು ತೀರ್ಮಾನಿಸಬಹುದು. ಆದರೆ ಆತನ ಈ ದಾಳಿ, ವಿಧ್ವಂಸನ ಕಾರ್ಯಗಳಿಂದ ಕೂಡಿದ ಆರಂಭದ

ಗೆಲುವು ದೀರ್ಘವಾಗಿ ನಿಲ್ಲಲಿಲ್ಲ. ಅಂತಿಮವಾಗಿ ಚಾಳುಕ್ಯರ ತ್ರೈಳೋಕ್ಯಮಲನು ಚೋಳರಾಜನ ಹಸಿತಲೆಯನ್ನು ಕತ್ತರಿಸಿ ಪ್ರಾಣತೆಗೆದನು. ಪಾಪದ ಬೆಳೆಯ ಹಾಗೆ ಇದ್ದ ಹಗೆ ಚೋಳನ ತಲೆಯನ್ನು ಕತ್ತರಿಸಿದ್ದು ಬೆಳೆಯನ್ನು ತೆಗೆದು ಕಟಾವು ಮಾಡಿದಂತೆ ಆಯಿತು. ಏಕೆಂದರೆ ಹಿಂದೆ ಗಂಗಪೆರ್ಮಾಡಿ ಮಾಡಿಸಿದ್ದ ಈ ಶ್ರೇಷ್ಠ ಜಿನಾಲಯಗಳನ್ನು ಆ ಪಾಣ್ಡ್ಯ ಚೋಳನು ಹಾಳುಮಾಡಿದ್ದರ ಪರಿಣಾಮವಾಗಿ ತಲೆದಂಡತೆತ್ತು ಅಧೋಗಿತಿಗೆ ಇಳಿದನು (ಮತ್ತೇ ಭವಿಕ್ರೀಡಿತ ವೃತ್ತ):–

ಬಳಿಕೀ ಬೆಳ್ವಲದೇಶಮಂ ಪಡೆದ ದಂಡಾಧೀಶ ಸಾಮನ್ತಮಂ
ಡಳಿಕರ್ದ್ಧರ್ಮ್ಮದ ಬಟ್ಟೆಗೆಟ್ಟು ನಡೆಯುತ್ತಿರ್ದ್ದಲ್ಲಿ ತಜ್ಞಾನಮನಂ
ಗೊಳೆ ಕಾಳೀಯ ಗುಣೇತರಂ ಕೃತಯುಗಾಚಾರಾನ್ವಿತಂ ಲಕ್ಷ್ಮಮಂ
ಡಳಿಕಂ ನಿರ್ಮ್ಮಳ ಧರ್ಮ್ಮವತ್ತಳೆಯ ನಷ್ಟೋದ್ಧಾರಮಂ ಮಾಡಿದಂ ||

(ಉತ್ಪಲಮಾಲಾ)
ಈ ನೆಲದೊಳ್ ನೆಗಳ್ತೆಯ ಪೊಗಳ್ತೆಯ ಬಾಳ್ತೆಯ ಪುಣ್ಯ ತೀರ್ತ್ಥಸ
ನ್ನಾನದೊಳಿನ್ನ ವಿಲ್ಲೆನೆಸಿ ಸಂದುದು ದಕ್ಷಿಣಗಂಗೆ ತುಂಗಭ
ದ್ರಾನದಿ ತನ್ನದೀ ತಟದೊಳೊಪ್ಪುವ ಕಕ್ಕರ ಗೊಣ್ಡಮೆಂಬಧಿ
ಷ್ಠಾನ ದೊಳುರ್ವ್ವರಾಧಿಪತಿ ಚಕ್ರಧರಂ ನೆಲಸಿರ್ದ ಬೀಡಿನೊಳ್ ||

ಚೋಳರು ಬರುವುದಕ್ಕೆ ಮೊದಲಿನಿಂದಲೂ ಯಾವ ಸುಸ್ಥಿತಿಯಲ್ಲಿ ಬೆಳ್ವಲ ದೇಶಭಾಗದ ದೇವಾಲಯಗಳು ಇದ್ದುವೊ ಅದೇ ಬಗೆಯಲ್ಲಿ ಪುನರ್ಭರಣಗೊಳಿಸ ಲಾಯಿತು. ಗಂಗರು, ರಾಷ್ಟ್ರಕೂಟರು ಕಟ್ಟಿಕಾಪಾಡಿದ. ಇಲ್ಲಿನ ಗುಡಿಗೋಪುರ ಗುಂಡಾರಗಳನ್ನು ತರುವಾಯದ ದಂಡಾಧೀಶರೂ, ಸಾಮಂತರೂ, ಮಂಡಳಿಕರೂ ತಮ್ಮ ಅಭಯಹಸ್ತದಲ್ಲಿ ಇಟ್ಟರು, ದಾರಿತಪ್ಪಿ

ನಡೆಯುತ್ತಿದ್ದವರನ್ನು ಮತ್ತೆ ಧರ್ಮಪಥಕ್ಕೆ ತಿದ್ದಿದರು. ನಷ್ಟವಾಗುತ್ತಿದ್ದ ಪವಿತ್ರವಾದ ಧರ್ಮಪತ್ರೆ, ಅಂದರೆ ದಾನಶಾಸನಗಳನ್ನು, ಉದ್ಧಾರಮಾಡಿದ ಮಾಂಡಳಿಕಲಕ್ಷ್ಮಭೂಪತಿ. ಒಳ್ಳೆಯ ಹೆಸರು, ಹೊಗಳಿಕೆ, ಬಾಳು ಇರುವ, ಪುಣ್ಯಂಬು ತೀರ್ಥಗಳಲ್ಲಿ ಇಂತಹವು ಇಲ್ಲವೆನಿಸಿದ್ದ, ದಕ್ಷಿಣದ ಗಂಗೆ ತುಂಗಾನದಿಯ ದಡದ ಊರಾದ ಕಕ್ಕಗೊಣ್ಣ ಎಂಬ ಒಂದು ನಡೆ ವೀಡಿನಲ್ಲಿ ಚಕ್ರಧರನಾದ ಭುವನೈಕ ಮಲ್ಲನು ಶಕಸಂವತ್ ೯೯೩ ರಲ್ಲಿ (ಕ್ರಿ.ಶ. ೧೦೭೧) ಉಪ್ಪಯಣ ಮಾಡಿದ್ದನು.

೫.೩. ಚಕ್ರವರ್ತಿ ಭುವನೈಕ ಮಲ್ಲನು ಇತ್ತ ಆದೇಶಕ್ಕೆ ಅನುಗುಣವಾಗಿ ಮಹಾಮಾಂಡಳಿಕ ಲಕ್ಷ್ಮನು ಧರ್ಮವತ್ತಳೆಯನ್ನು ಹೆಚ್ಚಾದಹುರುಪಿನಿಂದ ಜಾರಿಗೆ ತಂದನು–ಎಂದು ಶಾಸನಕಾರ ಹೇಳುವ ಈ ನೆಲೆಯ ನಡುವೆ ನಿಂತು, ನಾವೊಮ್ಮೆ ನಡೆದು ಬಂದ ದಾರಿಯನ್ನು ಹಕ್ಕಿ ನೋಟದಿಂದ ಕಣ್ಣಾಡಿಸಬೇಕು. ೧೦೭೧ ರಲ್ಲಿ ಆರಂಭವಾದ ಶಾಸನ ಪಾಠದ ವಸ್ತು ವಿಕಾಸ ಒಮ್ಮೆ ಹತ್ತನೆಯ ಶತಮಾನಕ್ಕೆ, ಗಂಗ–ರಾಷ್ಟ್ರಕೂಟರ, ಬೂತುಗ–ಕೃಷ್ಣರ ಕಾಲಕ್ಕೆ ವಾಪಸ್ಸಾಗಿದ್ದುದು ಈಗ ಮತ್ತೆ ಅಲ್ಲಿಂದ ೧೦೭೧ ಕ್ಕೇ (ಮರಳಿ) ಹಿಂತಿರುಗಿದೆ. ಇವೆರಡರ ನಡುವಿನ ಅವಧಿಯಲ್ಲಿ, ಸುಮಾರು ೧೦೪೫ ರಲ್ಲಿ ನಡೆದ ಚೋಳ ಚಾಳುಕ್ಯರ ಕಾಳೆಗದ ಕಥನವನ್ನು ತರಲಾಗಿತ್ತು. (ಮತ್ತೇಭವಿಕ್ರೀಡಿತ)–

ಶಕ ಕಾಳಂ ಗುಣ ಲಬ್ಧಿ ಮ್ಮಂಧ ರಗಣನಾವಿಖ್ಯಾತಮಾಗಲ್ ವಿರೋ
ಧಕ್ರಿ ದಾಬ್ದಂ ಬರೆ ಚೈತ್ರಮಾಗೆ ವಿಶ್ವತ್ಸಂಕ್ರಾನ್ತಿ ಯೊಳ್ ಪುಷ್ಯತಾ
ರಕೆ ಪೂರ್ಣ್ಣಾಂಗಿರಮಾಗೆ ಚಕ್ರಧರ ದತ್ತಾ ದೇಶದಿಂ ದೇಶಪಾ
ಲಕ ಚೂಡಾಮಣಿ ಧರ್ಮ್ಮವತ್ತಳೆಯ ನತ್ಯುತ್ಸಾಹದಿಂ ಮಾಡಿದ (೦) ||

ತ್ರಿಭುವನ ಚನ್ದ್ರ ಮುನೀನ್ದ್ರರ

ನಭಿವಂದಿಸಿ ಭಕ್ತಿಯಿಂದೆ ಕಾಲ್ಗರ್ಚ್ಚಿಜಗ

ತ್ರೃಭುವಿನ ಬೆಸದಿಂ ಲಕ್ಷ್ಮಣ

ವಿಭು ಕೊಟ್ಟಂ ಹಸ್ತಧಾರೆಯಿಂ ಶಾಸನಮ (೦) ||

ಭುವನೈಕಮಲ್ಲ ಚಕ್ರವರ್ತಿಯಿಂದ ಬಂದ ಅಪ್ಪಣೆಯಂತೆ ನಾಡಿನ ಆಡಳಿತ ನಡಸುವವರಲ್ಲಿ ನೆತ್ತಿಯ ಮಣಿಯಾದ ಲಕ್ಷ್ಮಣ ವಿಭುವು, ಚಾಳುಕ್ಯ ಜಗತ್ತಿನ ಒಡೆಯನ ಆಜ್ಞೈ ಯಿಂದ ಶಕಸಂವತ್ ೯೯೩ ರಲ್ಲಿ ಅಣ್ಣಿಗೆರೆಯ ಜಿನಾಲಯಕ್ಕೆ ಬಂದನು; ಬಸದಿಯೊಡೆಯರಾಗಿದ್ದ ತ್ರಿಭುವನ ಚಂದ್ರ ಮುನಿಮುಖ್ಯರಿಗೆ ಭಕ್ತಿಯಿಂದ ನಮಸ್ಕರಿಸಿ, ಅವರ ಕಾಲು ತೊಳೆದನು, ತನ್ನ ಕೈಧಾರೆಯಿಂದ ಚಕ್ರವರ್ತಿಯು ಕಳಿಸಿದ್ದ (ದಾನ ತಾಮ್ರ) ಶಾಸನವನ್ನು ಒಪ್ಪಿಸಿಕೊಟ್ಟನು. ಅಷ್ಟೇಅಲ್ಲದೆ–(ಚಂಪಕ ಮಾಲಾವೃತ್ತ):

ಎರಡಱುನೂಱ ಬಾಡದೊಳಗೀಜಿನಗೇಹನೆ ಪೂಜ್ಯ ಮೆಂದದ

ಕ್ಕರಸರ ಕಾಣ್ಕೆ ಬಿಟ್ಟು ಬಿಯಮುಂಬಳಂ ಉಣ್ಬಳಿದಾಯಮಾದಿಯಾ

ಗೆರಡಱುವತ್ತು ಪೊನ್ನಱುವಣಂ ಸಮಕಟ್ಟೆನೆ ಮಾಡಿಶಾಸನಂ

ಬರೆಯಿಸಿಕೊಟ ಧರ್ಮ್ಮ ಗುಣಮಂ ಮೆಱ ದಂ ನೃಪಮೇರುಲಕ್ಷ್ಮಣಂ ||

(ಮಹಾಸ್ರಗ್ಧರೆ)

ಜಿನನಾಥಾ ವಾಸನಂ ವಿಶ್ವ (ಕೃತ) ನಿಭಮಂ ಕಷ್ಟ ಕಾಲೇಯ ದುರ್ಭಾ

ವನೆಯಿಂ ಚಂಡಾಳ ಚೋಳಂ ಸುಡಿಸಿ ಕಿಡಿಸೆ ವಿಚ್ಛಿತ್ತಿಯಾಗಿರ್ದ್ದುದೇಂನೆ

ಟ್ಟನೆ ನಷ್ಟೋದ್ಧಾರಮಂ ಶಾಶ್ವತಯತಿಶಯಮಾಯ್ತೆಂಬಿನಂ ಮಾಡಿ ತಚ್ಛಾ

ಸನಮಾಚಂದ್ರಾರ್ಕ್ಕತಾರಂ ನಿಲೆ ನಿಲಿಸಿದನೇಂಧನ್ಯನೋ ಲಕ್ಷ್ಮಭೂಪಂ ||

ಅರಸರ್ಗ್ಗೆ ಸೇಸೆಯೆ

ನ್ದರಸರಕಾಣಿಕೆಯೆನ್ದು ದಾಯಧರ್ಮ್ಮದ ತೆಱೆಯೆ

ನ್ದಱುವಣದಿಂದಗ್ಗಳಮೆ

ನ್ದ ರೆ ವೀಸಮನಿಕ್ಕಿ ಕೊಂಡು ವರ್ಚ್ಚಂಡಾಳರ್ ||

ಪ್ರಸ್ತುತ ಶಾಸನವಿಷ್ಟೂ ಒಂದು ಭಾಗ, ಮೊದಲ ಘಟ್ಟದ ಶಾಸನ. ಚಾಳುಕ್ಯರು ಚೋಳರು ಕೈಗೊಂಡ ಯುದ್ಧದ ಪ್ರಸ್ತಾಪ, ಚೋಳರು ನಾಶಮಾಡಿದ ಬಸದಿಯನ್ನು ಪುನರ್ ಪ್ರತಿಷ್ಠಾಪಿಸಿ ದಾನದತ್ತಿ ಮತ್ತು ಸುಂಕರಹಿತ ಕೊಡುಗೆಗಳಿಂದ ಚಕ್ರವರ್ತಿಯ ಆದೇಶವನ್ನು ಲಕ್ಷ್ಮಣನು ಪಾಲಿಸಿದ್ದು, ಮತ್ತು ಮಾಮೂಲಿನ ಶಾಪಾಶಯದೊಂದಿಗೆ ಈ ಶಾಸನ ಮುಗಿದಿದೆ.

ಅ. ಈ ಗಾವರವಾಡ ಶಾಸನಗುತ್ತಿಯಲ್ಲಿ ಮೂರು ಶಾಸನಗಳಿವೆ. ಇದುವರೆಗೆ ವಿವರಿಸಿದ್ದು ಒಂದನೆಯ ಶಾಸನ; ಈ ಪ್ರಥಮ ಶಾಸನವು ಸಾಲು ೧ ರಿಂದ ೪೩ ರವರೆಗೆ ಇರುವಂತಹುದು. ಸಾಲು ೪೪ ರಿಂದ ಮುಂದಕ್ಕೆ ಸಾಲು ೫೧ ರವರೆಗೆ ಇರುವುದು ಎರಡನೆಯ ಶಾಸನ. ಈ ದ್ವಿತೀಯ ಭಾಗದ ಆರಂಭದಲ್ಲಿ ಮಹಾ ಸಾಮಂತ ಕಾರಿಯಂಕ–ಕಾಟನನ್ನು ಪರಿಚಯಿಸಿದೆ. ಈ ಕಾಟಿಯರಸನು ಕತ್ತಲೆ ಕುಲಕ್ಕೆ ಸೇರಿದವನು, ತನ್ನ ತೋಳಿನ ಕಸುವಿನಿಂದ ಗೆಲುವು ಗಳಿಸಿದವನು. ಕತ್ತಲೆವಂಶವನ್ನು ನೇಸರಿನಂತೆ ಬೆಳಗಿದ ಈತನು ಮಯೂರ ಪುರವರಾಧೀಶನು ಮತ್ತು ಜಿನಶಾಸನ ದೇವಿಯಾದ ಜ್ವಾಲಿನೀದೇವೀಲಬ್ಧವರ ಪ್ರಸಾದನು. ಕತ್ತಲೆ ಮನೆತನವೆಂದರೆ ಯಾವುದು, ಮಯೂರ ಪುರವೆಂದರೆ ಯಾವುದು–ಎಂಬಿತ್ಯಾದಿ ವಿಚಾರಗಳನ್ನು ಕುರಿತು ಬರೆದ ಪ್ರತ್ಯೇಕ ಸ್ವತಂತ್ರ ಸಂಪ್ರಬಂಧಗಳು ಇದೇ 'ಚಂದ್ರಕೊಡೆ' ಸಂಕಲನದಲ್ಲಿ ಸೇರ್ಪಡೆ ಆಗಿವೆ– ಅದರಿಂದ ಅವುಗಳನ್ನು ಕುರಿತು ಈ ಲೇಖನದಲ್ಲಿ ಪುನರುಕ್ತಿಗೆ ಹೋಗುವುದಿಲ್ಲ. ಮಹಾಸಾಮಂತಾಧಿಪತಿಯಾದ ಕಾಟರಸನು ಬೆಳ್ವಲ ವಿಷಯದ ಅಧಿಪತಿಯಾಗಿದ್ದನು:

ಜಗಮೆಲ್ಲಂ ದೇಸೆಗೆ ಕ
ಯ್ಮುಗಿಗೆಮ ಕೊಟ್ಟಜೆಯನೊನ್ದು ಕಾಗಿಣೆಯಮುನಾ
ಗಗನ ದೊಳಿರ್ಪ್ಪಾದಿತ್ಯಂ
ಬಗೆದುದನಿತ್ತಪನೆ ಬೆಳ್ವಲಾ ದಿತ್ಯನು ವೋಲ್ ||

ಲೋಕದ ಜನರು ದಿಕ್ಕುದಿಕ್ಕು ತಿರುಗಿ ಸೂರ್ಯನಿಗೆ ಕೈಮುಗಿಯುತ್ತಾರಲ್ಲದೆ ! ಸೂರ್ಯನಮಸ್ಕಾರ ಮಾಡಲಿ. ಆದರೆ ಆಕಾಶದಲ್ಲಿ ಇರುವ ಆ ಆದಿತ್ಯನಿಗೆ ಒಂದು ಬಿಡಿಕಾಸನ್ನು ಕೂಡ ಕೊಟ್ಟು ಗೊತ್ತಿಲ್ಲ, ಆ ಬಾನಿನೊಡೆಯ ರವಿಯು, ನಾವು ಬಯಸಿದ್ದನ್ನು ಈ (ಬೆಳ್ವಲಾಧಿಪತಿ) ಬೆಳ್ವಲದ ಸೂರ್ಯನಾದ ಕಾಟರಸನ ಹಾಗೆ ಕೊಡುತ್ತಾನೆಯೆ? ಹೀಗೆ ಹೆಸರುಗಳಿಸಿದ ಬೆಳ್ವಲದ ಆದಿತ್ಯ ಕಾಏಯಂ ಕಾಕಟಿನು ಶಕ ೯೬೪ ರಲ್ಲಿ, ಅಣ್ಣಿಗೆರೆಯ, ಗಂಗಪೆರ್ಮಾಡಿಯ ಬಸದಿಯ, ದಾನಶಾಲೆಗೆ ತನ್ನ ಆಳಿಕೆಯ ಗಾವರಿವಾಡ ಗ್ರಾಮದ ೫೦ ಮತ್ತರು ನೆಲವನ್ನು, ಅಲ್ಲಿಯ ಬಸದಿಯೊಡೆಯರಾದ ತ್ರಿಭುವನ ಚಂದ್ರ ಪಂಡಿತರಿಗೆ, ಅವರ ಕಾಲು ತೊಳೆದು ಧಾರಾಪೂರ್ವಕವಾಗಿ ಮಾಡಿಕೊಟ್ಟನು.

೭. ಇನ್ನು ಸಾಲು ೫೨ ರಿಂದ ಮುಂದಕ್ಕೆ ಇರುವುದಷ್ಟೂ ಈ ಶಾಸನದ ಮೂರನೆಯ ಭಾಗ. ಈ ಮೂರನೆಯ ಹಂತದ ಕೊಡಗೆಗಳನ್ನು ಬರೆಯುವಾಗ ಮೊದಲಿನೆರಡನ್ನೂ ಪ್ರತಿಮಾಡಿದೆ. ತೀರ್ಥಂಕರರಿಂದ ಉಪದೇಶಿಸಲ್ಪಟ್ಟ ಶ್ರೇಷ್ಠ ಶಾಸ್ತ್ರದಲ್ಲಿ ನಿಪುಣರೂ, ಯಾವಾಗಲೂ ಈ ಉತ್ತಮ ಧರ್ಮಮಾರ್ಗವನ್ನು ಉಪದೇಶ ಮಾಡುವುದರಲ್ಲಿ ನಿರತರೂ ಆದವರು ಉದಯ ಚಂದ್ರ ಸಿದ್ಧಾಂತದೇವರು. ಅವರ ಶಿಷ್ಯರೂ, ಬಳಾತ್ಕಾರ ಗಣವೆಂಬ ತಾವರೆಗಳಿರುವ ಕೊಳದಲ್ಲಿ ರಾಜಹಂಸನ ಹಾಗೆ ಇರುವವರೂ ಆದವರು ಸಕಳ ಚಂದ್ರದೇವರು. ರಾಜಧಾನಿ ಪಟ್ಟಣವಾದ ಅಣ್ಣಿಗೆರೆ ಮಹಾಸ್ಥಾನದಲ್ಲಿನ ಗಂಗಪೆರ್ಮಾಡಿ ಬಸದಿಗೆ, ಅದರ ವ್ಯಾಪ್ತಿಗೆ ಬರುವ ಹಳ್ಳಿಗಳಿಂದ

ಅನೇಕ ಶ್ರಾವಕ–ಶ್ರಾವಕಿಯರು ಸೇರಿ, ಬಸದಿಯ ಆಚಾರ್ಯರಿಗೆ, ಪೂಜಾಕಾರ್ಯ ವೆಸಗುವವರಿಗೆ (ದೇವಪುತ್ರರಿಗೆ) ದಾನಗಳನ್ನು ಕೊಟ್ಟರು. ಮೂವತ್ತುಜನ ದಾನಿಗಳ ತಂಡಕ್ಕೆ ಮುಂದಾಳುಗಳು ಚವುಂಡಗಾವುಂಡ ಮತ್ತು ಹೆಗ್ಗಡೆ. ದೇವಾಲಯಕ್ಕೆ ದಾನಗಳನ್ನು ಸಾಮೂಹಿಕವಾಗಿ ಕೊಟ್ಟರೂ ಅವರೆಲ್ಲರ ಹೆಸರನ್ನು ಅಡ್ಡಹೆಸರು ಸಹಿತ ಪಟ್ಟಿ ಮಾಡಿಕೊಡಲಾಗಿದೆ. ವ್ಯಕ್ತಿನಾಮ, ವೃತ್ತಿನಾಮ ಮತ್ತು ಅಡ್ಡಹೆಸರುಗಳ ವಿಶಿಷ್ಟತೆಯನ್ನು ವ್ಯಾಸಂಗ ಮಾಡುವವರಿಗೆ, ಸಾಮಾಜಿಕ ಅಧ್ಯಯನಕ್ಕೆ ಉಪಯುಕ್ತವಾದ ಮಾಹಿತಿಗಳು ಇದರಲಲ್ಲಿವೆ.

೭.೧. ಅಣ್ಣಿಗೆರೆಯಲ್ಲಿ ಗಂಗಪೆರ್ಮಾಡಿ ಬಸದಿ, ಆದಿನಾಥಸ್ವಾಮಿ ಬಸದಿ, ಸೇನಗಣದ ಬಸದಿ, ಮೊದಲಾದುವು ಇದ್ದುವೆಂಬುದು ಅನುಷಂಗಿಕವಾಗಿ ಈ ಶಾಸನದಿಂದ ತಿಳಿದುಬರುತ್ತದೆ. ಅಲ್ಲದೆ ಬಲ್ಲಿಯೇ ಸಮೀಪದ ಬಟ್ಟಕೆಱೆಯಲ್ಲಿ ಕಲಿದೇವ ಸ್ವಾಮಿ ಜಿನರ ಬಸದಿಯಿತ್ತು.

೭.೨. ಚಂಡವ್ವೆಯ ಮಗನಾದ ಹೆಗ್ಗಡೆ ಮಲ್ಲಯ್ಯನು ಅಣ್ಣಿಗೆರೆಯ ಜಿನಾಲಯವಾದ ಆದಿನಾಥ ಸ್ವಾಮಿ ಬಸದಿಯ ಆಚಾರ್ಯರಿಗೆ ಹೇಳಿದ ಕೆಲಸವನ್ನು ನಿರ್ವಹಿಸುತ್ತಾ ಸೇವೆ ಮಾಡಿಕೊಂಡಿರತಕ್ಕದ್ದು. ಕೇತಗಾವುಂಡನು ಬಸದಿಯ ಆಚಾರ್ಯರಿಗೆ ಪಾದಪೂಜೆ ಮಾಡಿ, ತಮ್ಮ ಮನೆದೇವರಾದ ಸೇನಗಣದ ಬಸದಿಗೆ ಎಂಟು ಮತ್ತರು ಭೂಮಿಕೊಟ್ಟನು. ಮೇಲಿನ ಹೇಳಿಕೆಯಲ್ಲಿ 'ಚಂಡವ್ವೆಯ ಮಗ' ಎಂದು ಹೇಳಿರುವುದು ವಿಶೇಷ ಗಮನಿಕೆಗೆ ಅರ್ಹವಾಗಿದೆ. ತಂದೆಯಮಗನೆಂದು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿದ್ದು ಸಹ ಹೀಗೆ ತಾಯಿಯಮಗನೆಂದು ಮಾತ್ರ ಹೇಳಿರುವುದಕ್ಕೆ ವಿಶಿಷ್ಟ ಕಾರಣಗಳಿರಬೇಕು.

೭.೩. ಎಮ್ಮೆಯ (ಕೇತಿ ಸೆಟ್ಟಿ), ಕಣಬಿಯ (ಸೆಟ್ಟಿ)–ಎಂಬುವು ದನಗಳ ವ್ಯಾಪಾರವೃತ್ತಿಯ ವಂಶದ ಹೆಸರಿರಬೇಕು. ಕಣಬಿ ಎಂಬುಡು ಕುದುರೆಗೆ ಸಂಬಂಧಿಸಿದ ಶಬ್ದ; ಅಡಿಬೆಳ್ಪಾಗೆ ಕಣಬನಕ್ಕುಂ ಎಂದು ಮಂಗರಾಜನಿಘಂಟು ತಿಳಿಸಿದೆ; ಅಂದರೆ ಬಿಳಿಯ ಪಾದಗಳನ್ನು ಉಳ್ಳಕುದುರೆ

ಕಣಬ. ಅದರಂತೆ ಕತ್ತೆಯ (ದಾರಿ ಸೆಟ್ಟಿ) ಶಬ್ಧವನ್ನೂ ಗಮನಿಸಬೇಕು. ಹೆಬ್ಬೆಯ ದೇವಿ ಗೊಳಿಯ ಚಾಡಿಸೆಟ್ಟಿ, ರುಡ್ಡುಲಿಯ ಸಂಕಿ ಸೆಟ್ಟಿ, ಕಂದಲ ಮಲ್ಲಿ ಸೆಟ್ಟಿ, ಬಯ್ಸರ ಬೊಪ್ಪಿ ಸೆಟ್ಟಿ, ಕಡಬರ ದೇವಿ ಸೆಟ್ಟಿ, ಮಂಚಲ ಬೋಸಿ ಸೆಟ್ಟಿ, ಬೆಣೆಲ ಮಲ್ಲಿಸೆಟ್ಟಿ, ಬೆಣ್ಣೆಯ ನಾಳಿ ಸೆಟ್ಟಿ, ದೊಡ್ಡವರ ಕೇತಿಸೆಟ್ಟಿ, ಮಂಜಡಿಯ ಏಚಿ ಸೆಟ್ಟಿ, ಮರಿಯರ ಕಲಿಸೆಟ್ಟಿ ಮುಂತಾದವು ಪರಿಶೀಲನಯೋಗ್ಯ ರೂಪಗಳು. ಬಯ್ಸರ–ಬಯಿಸರ ಎಂಬುದು ವೈಶ್ಯರಿಗೆ ಸಂಬಂಧಸಿದ್ದು; ರನ್ನಕವಿ, ಬಂಧುವರ್ಮಕವಿ ಜೈನ ವೈಶ್ಯಕುಲಜರು. ಕೆಲ್ಲ ಎಂಬುದೊಂದು ಪ್ರಾಚೀನ ಜೈನ ಮನೆತನ; ಈ ಕೆಲ್ಲ ಕುಲವನ್ನು ಕುರಿತು ಬರೆದಿರುವ ಒಂದು ಲೇಖನ ಈ ಸಂಕಲದಲ್ಲಿದೆ. ಇವರೆಲ್ಲ ದಾನಿಗಳೂ ಸೆಟ್ಟರು, ವಣಿಜರು, ಬಣಜಿಗರು.

೮. ಈ ಶಾಸನಗಳ ಶ್ರೇಣಿಯಲ್ಲಿ ಸೇರಿಕೊಂಡಿರುವ ಇನ್ನೊಂದು ಭಾಗವೆಂದರೆ ಮಹಾಪ್ರಧಾನನಾದ ರೇಚಿದೇವ ದಂಡನಾಥನಿಗೆ ಸಂಬಂಧಿಸಿದ್ದು (೮೫–೮೮). ವಸುಧೈಕ ಬಾಂಧವ ಎಂಬುದು ಈತನ ಒಂದು ಪ್ರಶಸ್ತಿ ರೇಚಣ ಎಂಬ ಹೆಸರೂ ಈತನಿಗೆ ಇದೆ. ಈ ರೇಚಿದಂಡ ನಾಥನು ಬಟ್ಟಕೆಱೆಯ (ಬಟ್ಗೆರೆ: ಎ.ಇ. ೧೩. ಪು. ೧೮೬, **Fleet, J,F.**) ಶ್ರೀಕಲಿದೇವಸ್ವಾಮಿ ಜಿನಶ್ರೀಪಾದಾರ್ಚಾನೆಗೆ ಹಾಗೂ ಕರ್ಪೂರ ಕುಂಕುಮ ಶ್ರೀಗಂಧ ಸಹಿತ ಅಷ್ಟವಿಧಾರ್ಚನೆಗೆಂದು ಗದ್ದೆಯನ್ನು ಬಿಟ್ಟುಕೊಟ್ಟನು. ಆ ಗದ್ದೆಯು ಅರಕೆಱೆ (ಅರಸುಕೆಱೆ) ಯಿಂದ ಮೂಡಲು ಕಡೆಗೆ ಇತ್ತು ಮತ್ತು ಅದು ಹನ್ನೆರಡು ಮತ್ತರು ಪ್ರಮಾಣದ್ದಾಗಿತ್ತು. ಈ ದತ್ತಿಷ್ಯನ್ನು ಬಸದಿಯ ಒಡೆಯರಾದ ಆಚಾರ್ಯರೂ ಹಾಗೂ ದೇವಸ್ಥಾನದ ಮೇಲ್ವಿಚಾರಕರೂ ಯಾವ ಸುಂಕಾದಿಗಳೂ ಇಲ್ಲದೆ ಪ್ರತಿಪಾಲಿಸುವರೆಂದು ಆಶಿಸಲಾಗಿದೆ [ಸಾಲು: ೮೫–೮೮].

೮.೧. ಮಹಾಪ್ರಧಾನನಾದ ವಸುಧೈಕ ಬಾಂಧವ ರೇಚಿ (ರೇಚಣ) ದಂಡನಾಥನು ದಾನಚಿಂತಾಮಣಿ ಅತ್ತಿಮಬ್ಬೆಯ ಮನೆತನವಾದ ವಾಜವಂಶದ ಕುಡಿ, ಆಕೆಯ ಅನಂತರದ ಆರನೆಯ ತಲೆಮಾರಿಗೆ ಸೇರಿದವನು. ಈತನು ಲಕ್ಕುಂಡಿಯಲ್ಲಿ ಭುವನೈಕ ಬಾಂಧವ

ಜಿನಾಲಯವನ್ನು ಮಾಡಿಸಿದ್ದನು. ಮಂತ್ರಿಯೂ ದಂಡಾಧೀಶನೂ ಸಾಹಿತ್ಯ ವಿದ್ಯಾಧರನೂ ಆಗಿದ್ದ ರೇಚಣನು ತನ್ನ ಆಶ್ರಯಕೊಟ್ಟು ಆಚಣ್ಣಕ್ವಿಯಿಂದ ವರ್ಧಮಾನ ಪುರಾಣವನ್ನು ಬರೆಸಿದನು, ಅರಸೀಕೆರೆ ಜಿನನಾಥಪುರ ಮತ್ತು ಮೇಲೆ ಹೇಳಿದಂತೆ ಲಕ್ಕುಂಡಿ ಸ್ಥಳಗಳಲ್ಲಿ ಜಿನಾಲಯಗಳನ್ನು ಮಾಡಿಸಿದನು, ಬಾಂಧಪುರ (ಬಂದಳಿಕೆ) ಮತ್ತು ಅಣ್ಣಿಗೆರೆಯ ಬಸದಿಗಳಿಗೆ ಒಸೆದು ದಾನಗಳನ್ನು ನೀಡಿದನು. ಕಲಚುರಿ ಬಿಜ್ಜಳನಿಗೆ ಸಪ್ತಾಂಗ ಸಂಪತ್ತಿಯನ್ನೂ, ಚಕ್ರವರ್ತಿತ್ವವನ್ನೂ ತಂದುಕೊಟ್ಟನು. ರೇಚಣ ದಂಡಾಧಿನಾಥನ ತೋಳುಗಳೆಂಬ ಕೊಂಬೆ ರೆಂಬೆಗಳ ಮೂಲಕ ಕಳಚುರ್ಯ ರಾಜ್ಯಲತೆ ಹಬ್ಬಿತೆಂದು ಶಾಸನ ಕೂಗಿ ಹೇಳುತ್ತದೆ. ರೇಚಣನು ಬಿಜ್ಜಳ ವಜ್ರದೇವ ಸೋವಿದೇವ ಮೈಲುಗಿ ದೇವ-ಮಲ್ಲಿಕಾರ್ಜುನ ಸಂಕಮ ಆಹವಮಲ್ಲ ಮತ್ತು ಸಿಂಘಣರಿಗೆ ಮಂತ್ರಿ ಪ್ರಧಾನಿ ಸೇನಾನಿ ಬಾಹತ್ತರ ನಿಯೋಗಾಧಿಪತಿ ಆಗಿದ್ದು ಕಲಚುರಿಗಳು ಕೆಲವು ಕಾಲ ಚಕ್ರಾಧರರಾಗಿ ಆಳಲು ನೆರವಾದನು. ಅಲ್ಲಿಂದ ಮುಂದೆ ಹೊಯ್ಸಳ ವೀರಬಲ್ಲಾಳನಲ್ಲಿ ಮಂತ್ರಿಯಾಗಿದ್ದನು [ನಾಗರಾಜಯ್ಯ, ಹಂಪ; ವಸುಧೈಕ ಬಾಂಧವ ರೇಚಣ ದಂಡಾಧಿನಾಥ; 'ಬೆಳ್ಳಿ ಬಾಗಿನ' (೧೯೯೪) ಸಂ. ಡಿ. ಲಿಂಗಯ್ಯ, ಪು. ೯೧-೯೯].

೮.೨. ವಸುಧೈಕ ಬಾಂಧವ ಬಿರುದಾಂಕಿತನಾದ ಈ ರೇಚಣ ದಂಡಾಧಿನಾಥನ ಒಟ್ಟು ಜೀವಿತಾವಧಿಯು ಒಂದು ಶತಮಾನದಷ್ಟು ದೀರ್ಘವಾದದ್ದೆಂದು ಶಾಸನಗಳಿಂದ ತಿಳಿದು ಬರುತ್ತದೆ. ಆತನ ೧೧೬೪ ರ ವೇಳೆಗೆ, ತನ್ನ ಏರುಂಜವ್ವನ ದಲ್ಲಿರುವಾಗಲೇ, ಕಲಚುರಿ ಬಿಜ್ಜಳನ ವರಿಷ್ಠ ಅಧಿಕಾರಿಯಾಗಿದ್ದನು. ೧೧೬೪ ರಿಂದ ೧೨೨೦ ರ ವರೆಗೆ ಆತನ ವಿವಿಧ ಅಧಿಕಾರ ಹುದ್ದೆಗಳ, ಆಶ್ರಯ ದಾತರ ಮಾಹಿತಿಗಳಿವೆ. ಈ ಪ್ರಸ್ತುತ ಗಾವರವಾಡ ಶಾಸನದ ೧೦೭೧-೭೨ ರ ಅವಧಿಯ ಪೂರ್ವಾರ್ಧ ಘಟ್ಟಕ್ಕೆ ರೇಚಣ ಸೇರಿದವನಲ್ಲ. ಮಹಾಸಾಮಂತ ಕಾಟಿಯಂಕ ಕಾಜಿನವರೆಗಿನ ಶಾಸನದ ಒಕ್ಕಣೆ ಚಾಳುಕ್ಯರ ಆಳ್ವಿಕೆಗೆ ಸೇರಿದ್ದಾಗಿದೆ; ಸಾಲು ೮೫ ರಿಂದ ಬರುವ ಭಾಗ ರೇಚಣನಿಗೆ ಸೇರಿದ್ದು. ಇದು ಚಾಳುಕ್ಯರ ಆಳ್ವಿಕೆಯ ಭಾಗ ಹೌದೆ ಅಲ್ಲವೆ ಎಂಬುದು ಚರ್ಚಿಸಬೇಕಾದ ವಿಷಯ ಏಕೆಂದರೆ ರೇಚಣನು ಚಾಳುಕ್ಯರಲ್ಲಿಯೂ ಅಧಿಕಾರಿಯಾಗಿದ್ದನೆಂಬುದಕ್ಕೆ

ಬೇರೆ ಆಧಾರಗಳಿಲ್ಲ. ಅಲ್ಲದೆ ಪ್ರಸ್ತುತ ಶಾಸನದಲ್ಲಿ, ಎಲ್ಲ ಪ್ರಶಸ್ತಿಗಳೊಂದಿಗೆ ರೇಚಣನು ಮಹಾಪ್ರಧಾನನೆಂದು ಹೇಳಿದೆಯೇ ಹೊರತು, ಆತ ಯಾರಲ್ಲಿ ಮಹಾಪ್ರಧಾನ ಆಗಿದ್ದನೆಂದು ಖಚಿತವಾಗಿ ಹೇಳಲ್ಲದಿರುವುದು ಸಂಶಯಕ್ಕೆಡೆಯಾಗಿದೆ. ಚಾಳುಕ್ಯರಲ್ಲಿಯೇ ಆತನು ಪ್ರಧಾನನಾಗಿದ್ದರೆ, ಆ ಅವಧಿಯಲ್ಲಿ ಚಾಳುಕ್ಯರ ರಾಜನಾಗಿದ್ದ ತ್ರೈಲೋಕ್ಯಮಲ್ಲ ತೈಲಪ ೪ (೧೧೪೯-೧೧೬೨) ಅಥವಾ ಜಗದೇಕ ಮಲ್ಲ (೧೧೬೩-೧೧೮೩) ಇವರಲ್ಲಿ ಅಧಿಕಾರಿಯಾಗಿರಬೇಕು; ಕಲಚುರಿ ರಾಜರಲ್ಲಿ ಮಹಾಪ್ರಧಾನನಾಗಿದ್ದರೆ ಬಿಜ್ಜಳ ೧೧(೧೧೬೨-೬೭) ಅಥವಾ ಸೋವಿದೇವನಲ್ಲಿ (೧೧೬೭-೭೬) ಅಧಿಕಾರಿಯಾಗಿದ್ದಿರಬೇಕು. ಆದರೆ ಈ ಶಾಸನ ಅತ್ತ ಚಾಳುಕ್ಯರ ಮತ್ತು ಇತ್ತ ಕಲಚುರಿಗಳ ಪ್ರಸ್ತಾಪ ಇಲ್ಲದೆಯೇ ನೇರವಾಗಿ ಮಹಾಪ್ರಧಾನ ರೇಚಿದೇವನೆಂದು ಹೇಳಿರುವುದು ಸಮಸ್ಯೆಯನ್ನು ಒಡ್ಡಿದಂತಾಗಿದೆ. ಅಂದಿನ ಶಾಸನಕಾರನಿಗೆ ಗೊಂದಲಗಳಿಲ್ಲದಿರಬಹುದು. ಆದರೆ ಇಂದಿನ ಓದುಗನಿಗೆ ಇದು ಅಸ್ಪಷ್ಟವಾಗಿದೆ. ಸಂದೇಹ ಲಾಭ **(Benefit of the doubt)** ವನ್ನು ಚಾಳುಕ್ಯರಿಗೆ ಕೊಡಬೇಕಾಗಲೂ ಬಹುದು, ಏಕೆಂದರೆ ಇಡೀ ಶಾಸನದ ಬಹುಭಾಗ ಕಲ್ಯಾಣಿ ಚಾಳುಕ್ಯರ ಆಳ್ವಿಕೆಯದೇ ಆಗಿದೆ. ಈ ಅನುಮಾನ ಫಾಯಿದೆಯನ್ನು ಚಾಳುಕ್ಯರ ಪರವಾಗಿಸಿದಾಗ, ವಸುಧೈಕ ಬಾಂಧವರೇಚಣನು ಮಹಾಪ್ರದಾನನಾಗಿ ಚಾಳುಕ್ಯರಲ್ಲೂ ಇದ್ದು ಅನಂತರ ತನ್ನ ನಿಷ್ಠೆಯನ್ನು ಕಲಚುರಿ ಬಿಜ್ಜಳನಿಗೆ ಪಕ್ಷಾಂತರ ಗೊಳಿಸಿದನೆಂದು ತಿಳಿಯಬೇಕಾಗುತ್ತದೆ.

೯. ಈ ಶಾಸನವನ್ನು, ಕಡೆಯ ಭಾಗವನ್ನು ಬಿಟ್ಟು, ಬರೆದವನು ಪ್ರಸಿದ್ಧ ಕವಿ ಮತ್ತು ಶಾಸನಕಾರವಾದ ಶಾಂತಿನಾಥನೆಂದು ಧಾರಳವಾಗಿ ಮತ್ತು ಖಚಿತವಾಗಿ ಹೇಳಬಹುದು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು (ತಾಳಗುಂದ ಹೋಬಳಿ) ಬಳ್ಳಿಗಾವೆ (ಬೆಳಗಾಮಿ, ಬಳ್ಳಿಗಾವಿ, ಬಳಿನಗರ, ಬಳಿಗ್ರಾಮು) ೧೩೬ ನೆಯ ಶಾಸನವನ್ನು ಶಾಂತಿನಾಥ ಕವಿ ರಚಿಸಿದ್ದಾನೆ [ಎ.ಕ. ೭-೧ ಶಿಕಾರಿಪುರ. ೧೩೬. ೧೦೬೮]. ಜತೆಗೆ, ಆ ಶಾಸನವನ್ನು, ಶಕ ೯೯೦ ರಲ್ಲಿ ಬರೆಯುವುದಕ್ಕೂ ಮೊದಲು, ೧೦೬೨ ರಲ್ಲಿ 'ಸುಕುಮಾರಚರಿತೆ' ಎಂಬ ಚಂಪೂಕಾವ್ಯವನ್ನು ರಚಿಸಿದ್ದಾನೆ [(ಸಂ)

ನರಸಿಂಹಾಚಾರ್, ಡಿ. ಎಲ್, ಶಾಮರಾಯ, ತ.ಸು. (೧೯೫೪)]. ಶಿಕಾರಿಪುರ ಶಾಸನವನ್ನು ಬರೆದಾದ ಮೂರುವರ್ಷದ ಮೇಲೆ ಶಕ ೯೯೩ ರಲ್ಲಿ ಒಂದು, ಶಕ. ೯೯೪ ರಲ್ಲಿ ಒಂದು–ಹೀಗೆ ಎರಡೂ ಸೇರಿ ಇರುವ ಈ ಗಾವರವಾಡ ಶಾಸನದ ಮೊದಲೆರಡು ಭಾಗವನ್ನು ಶಾಂತಿನಾಥನು ಬರೆದಿದ್ದಾನೆ.

೯.೧. ಗಾವರವಾಡ ಶಾಸನಕ್ಕೂ (ಬ), ಶಿಕಾರಿಪುರ ೧೩೬ ನೆಯ ಶಾಸನಕ್ಕೂ (=ಅ) ಇರುವ ಸಾಮ್ಯ ವೈಷಮ್ಯ ಗಳನ್ನು ತೌಲನಿಕವಾಗಿ ಪರಿಶೀಲಿಸಿಕೂಡ ಅ–ಬ ಶಾಸನಗಳು ಒಬ್ಬನೇ ಶಾಸನಕವಿಯ ರಚನೆಯೆಂದು ತೀರ್ಮಾನಿಸಬಹುದು. ಅ–ಬ ಶಾಸನಗಳೆರಡೂ ಜೈನ ಶಾಸನಗಳೆಂಬುದೊಂದೇ ಈ ತೀರ್ಮಾನಕ್ಕಿರುವ ಮುಖ್ಯ ಆಧಾರವಲ್ಲವಾದರೂ ಒಟ್ಟು ಹೋಲಿಕೆಯ ಚೌಕಟ್ಟಿನಲ್ಲೂ ಅದೂ ಬರುತ್ತದೆ:

**i.** ಎರಡೂ ಜೈನಶಾಸನಗಳು **ii.** ಎರಡರ ಆರಂಭದಲ್ಲೂ ಸಮಾನ ಅನುಷ್ಟುಬ್ ಸಂಸ್ಕೃತ ಶ್ಲೋಕವಿದೆ **iii.** ಎರಡರ ಪ್ರಾರಂಭದಲ್ಲಿ ಕಲ್ಯಾಣಿ ಚಾಳುಕ್ಯರ ರಾಜಪ್ರಶಸ್ತಿ ಸಮಾನವಾಗಿದೆ–ಆದರೆ 'ಅ' ದಲ್ಲಿ ತ್ರೈಲೋಕ್ಯಮಲ್ಲನ ಹಾಗೂ 'ಬ' ದಲ್ಲಿ ಭುವನೈಕ ಮಲ್ಲನ ಸ್ತುತಿಯಿದೆ. **iv.** 'ಅ' ದ ಸಾಲು ೧೪ ರ ಕಡೆಯ ಭಾಗದಿಂದ ಕೆಲವು ಪದ್ಯಗಳು ಔಚಿತ್ಯವರಿತು 'ಬ' ದಲ್ಲೂ ಬಂದಿವೆ. **v.** ತ್ರೈಲೋಕ್ಯಮಲ್ಲನು ಕುರವತ್ತಿಯಲ್ಲಿ ಜಲಸಮಾಧಿಯಾದ ೧೪ ದಿನಗಳಾದ ಮೇಲೆ ಮತ್ತು ಭುವ ನೈಕಮಲ್ಲನು ಪಟ್ಟಾಭಿಷಿಕ್ತನಾದಾಗ ಬರೆದದ್ದು 'ಅ' ಶಾಸನ; ಭುವನೈಕಮಲ್ಲನು ಪಟ್ಟವೇರಿ ಮೂರು ವರ್ಷಗಳಾದ ಮೇಲೆ ಬರೆದದ್ದು 'ಬ' ಶಾಸನ. **vi.** ಲಕ್ಷ್ಮನೃಪನಿಗೆ ಬನವಾಸಿಯ ಮಹಾಮಂಡಲೇಶ್ವರ ಪ್ರತಿಪತ್ತಿಯನ್ನು ಒಪ್ಪಿಸಲಾದದ್ದು ' ಅ' ಶಾಸನ, ಮಹಾಮಂಡಲೇಶನಾಗಿ ಆಳುತ್ತಿರುವುದು 'ಬ' ದಲ್ಲಿದೆ. ಶಾಂತಿನಾಥಕವಿ ಲಕ್ಷ್ಮರಸನಲ್ಲಿ ಅರ್ಥಾಧಿಕಾರಿ–ಮಂತ್ರಿ–ದಂಡನಾಥನಾಗಿದ್ದನು; ಶಾಂತಿನಾಥನು ಜೈನಕವಿ ಯೆಂಬುದೂ ಇಲ್ಲಿ ಪ್ರಸ್ತುತವಾಗಿದೆ.

೯.೨. ಶಾಸನ 'ಅ' ಸಾಲುಗಳು ೧–೨, ೧೪–೧೬, ೧೯–೨೦, ೨೮–೨೯, ೩೨–೩೩ ಇವು ಕ್ರಮವಾಗಿ 'ಬ'ದ ಸಾಲುಗಳು ೧–೨, ೪–೬, ೮–೧೦, ೧೨–೧೩ ಮತ್ತು ೧೦–೧೧ ಕ್ಕೆ ಹೊಂದಿಕೊಂಡಿವೆ, ಅಷ್ಟೇ ಅಲ್ಲ ಅದೇ ಪುನರುಕ್ತವಾಗಿದೆ. ಇವೆರಡೂ ಶಾಸನಗಳು ಒಬ್ಬ ಶ್ರೇಷ್ಠ ಚಂಪೂಕವಿಯ ಖಂಡಕಾವ್ಯವೆಂಬಂತಿವೆ. ಲಕ್ಷ್ಮನೃಪನ ಪರಾಕ್ರಮದ ಪರಾಕು ಹೇಳುವ ಪದ್ಯವಿದು ಎರಡೂ ಕಡೆ ಇದೆ–

ಅಣುಗಾಳ್ ಕಾರ್ಯ್ಯದ ಶೌರ್ಯ್ಯದಾಳ್ ಚಾಳುಕ್ಯರಾಜ್ಯಕ್ಕೆ ಕಾರಣ
ಮಾದಾಳ್ ತುಱಿ ಲಾಳ್ತನಕ್ಕೆ ನೆಱಿದಾಳ್ ಕಟ್ಟಾಯದಾಳ್ ಮಿಕ್ಕಮ
ನ್ನಣೆಯಾಳ್ ಮಾಂತನದಾಳ್ ನೆಗೞ್ತೆ ವಡೆದಾಳ್ ವಿಕ್ರಾಂತದಾಳ್ ಮೇಳದಾಳ್
ರಣದಾಳಾಳ್ದನ ನಚ್ಚುವಾವೆಡೆಯೊಳಂ ವಿಶ್ವಾಸದಾಳ್ ಲಕ್ಷ್ಮಣಂ ||

ಕವಿಯೂ ಕಲಿಯೂ ಆಡಳಿತಗಾರನೂ ಆದ ಶಾಂತಿನಾಥನ ಶೈಲಿಯ ವರ್ಣ್ಣನೆಯ ಸಿಕ್ಕ ಎರಡೂ ಶಾಸನಗಳಲ್ಲಿ ಒಡಮೂಡಿದೆ. ಇಷ್ಟು ತನ್ಮಯವಾಗಿ ಲಕ್ಷ್ಮರಸನನ್ನು ಚಿತ್ರಿಸುವುದಕ್ಕೆ ಶಾಂತಿನಾಥನಿಗೆ, ಅದು ತನ್ನ ಧಣಿಯನ್ನು ಕುರಿತದ್ದು ಎಂಬ ಕೃತಜ್ಞತಾಭಾವವೊಂದೇ ಕಾರಣವಲ್ಲ. ಲಕ್ಷ್ಮನೃಪನು ತ್ರೈಲೋಕ್ಯಮಲ್ಲ ಮತ್ತು ಅವನ ಹಿರಿಯ ಮಗ ಭುವನೈಕಮಲ್ಲ–ಈ ಇಬ್ಬರು ಚಕ್ರವರ್ತಿಗಳ ವಾತ್ಸಲ್ಯದಕರು. ಈ ಚಕ್ರೇಶರಿಬ್ಬರೂ ಓರಂದದ ಕೂರ್ಮೆಯಿಂದ ಬನವಾಸಿ ವಿಷಯವನ್ನು ಶಾಸನ ಬರೆದುಕುದುರೆ ಆನೆ ಪಟ್ಟಸಾಧನ ಸಮೇತ ಮಂಡಳಿಕ ತ್ರಿಣೇತ್ರ ಲಕ್ಷ್ಮರಸನಿಗೆ ಕೊಟ್ಟರು.

೯.೩. ಶಿಕಾರಿಪುರ ೧೩೬ ಮತ್ತು ಗಾವರವಾಡ ಶಾಸನಗಳು ಭಿನ್ನಕರ್ತೃಕ ರಚನೆ ಗಾಳಾಗಿರದೆ ಏಕಕವಿಕೃತವೆಂದು ಸಾರಲು ಸಹಾಯವಾಗುವ ಇನ್ನೆರಡು ಸಮಾನ ವೃತ್ತ ಪದ್ಯಗಳನ್ನು ನೋಡಬಹುದು; ಇವು ಚಾರಿತ್ರಿಕವಾಗಿಯೂ ಗಮನಿಸತಕ್ಕ ಪದ್ಯಗಳು–

**i.** ಕುದುರೆಯಮೇಲೆ ಬಿಲ್ವರಸುಸೂಲಿಗೆ ತೀರಿಕೆ ಭಿಣ್ಡಿವಾಳಮೆ
ತ್ತಿದ ಕರವಾಳು ಮಾಟಿಡುವ ಕರ್ಕಡೆ ಪಱುವಚಕ್ರಮೆಂದೊಡೆಂ
ತೊದರುವರೆಂತು ಪಾಯಿಸುವರೆಂತು ತಱುಂಬುವರೆನ್ತು ನಿಲ್ವರೆಂ
ತೊದವುವರೆಂತು ಲಕ್ಷ್ಮಣನೊಳಾಂತು ಬರ್ದುಂಕುವರನ್ಯ ಭೂಭುಜರ್ ||

**ii.** ಕಲಿತನ ಮಿಲ್ಲಚಾಗಿಗೆ ವದಾನ್ಯತೆ ಮೆಯ್ಗಲಿಗಿಲ್ಲ ಚಾಗಿ ಮೆ
ಯ್ಗಲಿಯೆನಿಪಂಗೆ ಶೌಚಗುಣವಿಲ್ಲ ಕರಂ ಕಲಿಚಾಗಿ ಶೌಚಿಗಂ
ನಿಲೆ ನುಡಿವೋಜೆಯಿಲ್ಲ ಕಲಿಚಾಗಿ ಮಹಾಶುಚಿ ಸತ್ಯವಾದಿಮ
ಣ್ಡಳಿಕರೋಳೀತನೆಂದು ಪೊಗಳ್ಗುಂ ಬುಧಮಣ್ಡಳಿ ಲಕ್ಷ್ಮಭೂಪನಂ ||

ಈ ರೀತಿಯಾಗಿ ಶಾಂತಿನಾಥ ಕವಿ ತನ್ನ ಹಿಂದಿನ ಮತ್ತು ಅನಂತರದ ಕೆಲವು ಜೈನ ಕವಿಗಳ ಮಾದರಿಗೆ ಸೇರಿದವನಾಗಿದ್ದಾನೆ. ಪಂಪನು ಕವಿ–ಕಲಿ, ಪ್ರಾಯಃ ಶಾಸನ ಕವಿ; ಪೊನ್ನನು ಕವಿ ಮತ್ತು ಶಾಸನ ಕವಿ [ನಾಗರಾಜಯ್ಯ, ಹಂಪ: ಶಾಸನಗಳಲ್ಲಿ ಎರಡುವಂಶಗಳು: ೧೯೪೪:೪೯]; ರನ್ನನು ಕವಿ, ಕಲಿ, ಶಾಸನ ಕವಿ; ಜನ್ನನೂ ರನ್ನನಂತೆಯೇ; ಪಾರ್ಶ್ವ ಪಂಡಿತನೂ, ಶಾಂತಿನಾಥನೂ ಇದೇ ಬಗೆಯವರು.

೧೦. ಈ ಶಾಸನವು ಭೌಗೋಳಿಕ ವಿವರಗಳನ್ನು, ಕೆಲವು ಊರು ಕೇರಿಹೊಲ ಮನೆಗಳನ್ನೂ ತುಂಗಭದ್ರಾತೊರೆಯನ್ನೂ ಪರಿಚಯಿಸಿದೆ. ಭುವನೈಕಮಲ್ಲನು ತುಂಗಭದ್ರೆಯ (೩೩–೩೪) ದಡದ ಊರು ಕಕ್ಕರ ಗೊಣ್ಡದಲ್ಲಿ ಬೀಡು ಬಿಟ್ಟನು (೩೪). ಅಣ್ಣಿಗೆರೆ (ಧಾಜಿ/ನವಲ್ಗುಂದ ತಾ||; ೧೬,೫೦,೫೫), ಅರಕೆರೆ (೮೭), ಅಯಾವೊಳೆ (೮೮), ಇಟ್ಟಗೆ (೧೮–೧೯) ಕಕ್ಕರಗೊಣ್ಡ (೩೪), ಕುಳುಪಳ್ಳ (೫೯ಏ, ಗುಮ್ಮಂಗೊಳ (೧೯: ಗುಂಗೊಲ) ಗಾವರಿವಾಡ (೧೯, ೫೦), ಪುಲಿಗೆರೆ–

೩೦೦(೭), ಬಟ್ಟಕೆರೆ (೮೫), ಮಯೂರಾವತಿ (೪೫), ಮೂಡಗೇರಿ (೧೮), ಹೂಲಿಗೊಳ (೫೯), ಹೊಲಗೆಱೆ (೯೫) ಮೊದಲಾದ ಸ್ಥಳನಾಮಗಳು ಶಾಸನೋಕ್ತವಾಗಿವೆ. ಇವೆಲ್ಲ ಊರುಗಳೂ ಬೆಳ್ವೊಲ-೩೦೦(೭,೧೬,೨೮,೩೧) ಮತ್ತು ಪುಲಿಗೆಱೆ-೩೦೦(೭) ಸೇರಿ ಆದ ಎರಡಱುನೂಱು (೭-೮) ಪ್ರದೇಶದ ಹರಹಿನಲ್ಲಿರುವಂತಹವು, ಮತ್ತು ಲಕ್ಷ್ಮರಸ ಮಹಮಂಡಲಿಕ ಆಡಳಿತ ಭಾಗಗಳು. ಇಷ್ಟು ಸ್ಥಳಗಳನ್ನು ಇಲ್ಲಿ ಹೆಸರಿಸಿದ್ದರೂ ಶಾಸನದ ಕೇಂದ್ರ ವಿಷಯದ ದೃಷ್ಟಿಯಿಂದ ಅಣ್ಣಿಗೆರೆಯೇ ಮುಖ್ಯ.

೧೧. ಧಾರ್ಮಿಕ ಅಧ್ಯಯನದ ನಿಟ್ಟಿನಿಂದ, ಈ ಶಾಸನ ಜೈನ ಧರ್ಮದ ಉತ್ಕರ್ಷವನ್ನು ಸಾರುವ ನಿರೂಪಣೆಯಿದೆ. ಬಸದಿಗಳೂ, ಬಸದಿಯ ಆಚಾರ್ಯರೂ ಇಲ್ಲಿ ಕೀರ್ತಿತರಾಗಿದ್ದಾರೆ. ಗಂಗರ ಗುರುಗಳಾದ ವಾರ್ಧಮಾನರ ವಿಚಾರ. ಬಂದಿದೆ. ವಿದ್ಯಾನಂದ ಸ್ವಾಮಿ, ತಾರ್ಕಿಕರಲ್ಲಿ ಅರ್ಕ (ಸೂರ್ಯ) ನೆನಿಸಿದ ಮಾಣಿಕ್ಯ ನಂದಿ, ಗುಣ ಕೀರ್ತಿ-ಮೊದಲಾದ ಮುನಿಗಳನ್ನು ಕುರಿತ ಮಾಹಿತಿಯನ್ನು ಈ ಶಾಸನ ಒದಗಿಸುವಾಗ ತೋರಿದ ಗೌರವಾದರ ತನ್ಮಯತೆ ಎಂತಹ ಪ್ರೌಢವಾದ ಶಯ್ಯೆ-ಶೈಲಿಯಲ್ಲಿ ಒಡಮೂಡಿದೆ ನೋಡಿ:

ಪರಮಶ್ರೀಜಿನಶಾಸನಕ್ಕೆ ಮೊದಲಾದೀ ಮೂಲಸಂಘಂ ನಿರ
ನ್ತರ ಮೊಪ್ಪುತ್ತಿರೆ ನಂದಿಸಂಘವೆಸರಿಂದಾದನ್ವಯಂ ಪೆಂಪುವೆ
ತ್ತಿರೆ ಸನ್ದರ್ಪ್ಪಳಗಾ ಱ ಮುಖ್ಯಗಣದೊಳು ಗಂಗಾನ್ವಯಕ್ಕಿನ್ತಿವ
ರ್ಗ್ಗುರುಗಳ್ ತಾಮೆನೆ ವರ್ದ್ಧಮಾನ ಮುನಿನಾಥರ್ಧಾರಿಣೀ ಚಕ್ರದೊಳ್ ||

[ಮತ್ತೇಭವಿಕ್ರೀಡಿತ ವೃತ್ತ ಪದ್ಯ, ಸಾಲುಃ ೨೨-೨೩]

ಶ್ರೀನಾಥ ಜ್ಜೈನ ಮಾರ್ಗ್ಗೋತ್ತಮರೆನಿಸಿ ತಪಃ ಖ್ಯಾತಿಯಂ ತಾಳ್ದಿದರ್ಸ್ಸ

ಜ್ಞಾನಾತ್ಮರ್ವ್ವರ್ದ್ಧಮಾನ ಪ್ರವರರವರ ಶಿಷ್ಯರ್ಮ್ಮಹಾವಾದಿಗಳ್ ವಿ

ದ್ಯಾನನ್ದ ಸ್ವಾಮುಗಳ್ ತನ್ಮುನಿಪತಿಗನುಜರ್ತ್ತರ್ಕ್ಕಕಾರ್ಕ್ಕಾಭಿ

ಧ ನಾಧೀನಮ್ಮಾಣಿಕನನ್ದಿ ಪತಿಗನುಜರ್ತ್ತರ್ಕ್ಕಕಾರ್ಕ್ಕಾಭಿ

ಧಾನಾಧೀನಮ್ಮಾಣಿಕನನ್ದಿ ವ್ರತಿಪಟಿಗಳ ವರ್ಸ್ವಾಸನೋದಾತ್ತಹಸ್ತರ್ ||

[ಸ್ರಗ್ಧರಾವೃತ್ತ ಪದ್ಯ, ಸಾಲು: ೨೩-೨೫]

ತದಪತ್ಯಗ್ಗುಣು ಕೀರ್ತ್ತಿ ಪಣ್ಡಿತರವರ್ತ್ತಚ್ಚಾ ಸನ ಖ್ಯಾತಿ ಕೋ

ವಿದರಾ ಸೂರಿಗಳಾತ್ಮಜರ್ವ್ವಿಮಳ ಚನ್ದ್ರತ್ರ್ಯಪದಾಂಭೋಜ ಷ

ಟ್ಪದರುದ್ಯದ್ಗುಣ ಚನ್ದ್ರರನ್ತವರ ಶಿಷ್ಯರ್ ನೋಡಿ ಶಾಸ್ತ್ರಾತ ದೊಳ್

ವಿದಿತರಾಗಣ್ಡವಿಮುಕ್ತರಿನ್ನ ಭಯನನ್ದ್ಯಾ ಚಾರ್ಯ್ಯ ರಾರ್ಯೋತ್ತಮರ್ ||

[ಮತ್ತೇಭ ವಿಕ್ರೀಡಿತ ವೃತ್ತ, ಸಾಲುಃ ೨೫-೨೭]

೧೧.೧. ಮೇಲ್ಕಂಡ ಮೂರು ವೃತ್ತಗಳಲ್ಲಿ ಪರಿಚಯಿಸಿರುವ ಗುರ್ವಾವಳಿಯು ಮೂಲ ಸಂಘಕ್ಕೆ ಸೇರಿ ಹಿರಿಮೆಹೊಂದಿದ ನಂದಿ ಸಂಘದ ಅನ್ವಯದಲ್ಲಿ ಮುಖ್ಯವಾದ ವ (ಬ) ಳಗಾ ಱ ಎಂಬ ಗಣವಿತ್ತು. ಈ ಬಳಗಾಱಗಣದ ಪ್ರಾಚೀನ ಆಚಾರ್ಯರಾದ ವರ್ಧಮಾನ ಮುನಿನಾಥರು ಗಂಗವಂಶಕ್ಕೆ ಮುಖ್ಯ ಗುರುಗಳೆಂದು ಜನಮನ್ನಣೆ ಗಳಿಸಿದ್ದರು; ಮುಕ್ತಿಯೆಂಬ ಲಕ್ಷ್ಮಿಗೆ ಒಡೆಯರೂ, ಜಿನಮಾರ್ಗದಲ್ಲಿ ಮೇಲಾದವರೂ ಎನಿಸಿ ತಪಸ್ಸಿನಿಂದ ಕೀರ್ತಿ ಗಳಿಸಿದ್ದರು ಅಂತಹ ಹೆಸರಾಂತ ರಿಷಿ ವರ್ಧಮಾನರ ಶಿಷ್ಯರು ಮಹಾವಾದಿಯಾಗಿದ್ದ ವಿದ್ಯಾನಂದಸ್ವಾಮಿ, ಅವರ ಜತೆಯವರು ಮಾಣಿಕನನ್ದಿವ್ರತಿಪತಿ, ಅವರ ಶಿಷ್ಯರು ಗುಣಕೀರ್ತಿ ಪಣ್ಡಿತರು, ಅವರ ಶಿಷ್ಯರು ವಿಮಳಚನ್ದ್ರರು, ಇವರ ಶಿಷ್ಯರು ಗುಣಚನ್ದ್ರರು, ಇವರ ಶಿಷ್ಯರು ಗಣ್ಡ ವಿಮುಕ್ತರು ಮತ್ತು ಅಭಯನನ್ದಿ ಆಚಾರ್ಯರು.

೧೧.೨. ಇಲ್ಲಿ ಉಲ್ಲೇಖಿಸಿರುವ ಬಾಳಗಾಱ ಗಣದ ಗುರುಶಿಷ್ಯ ಪರಂಪರೆ ಪ್ರಖ್ಯಾತವಾದದ್ದು. ಈ ರಿಷಿಗಳಿಗೆ ಸಂಬಂಧಿಸಿದ ಇನ್ನೂ ಕೆಲವು ಮಾಹಿತಿಗಳು ಅನ್ಯಾನ್ಯ ಶಾಸನಗಳಲ್ಲಿ ಸಿಗುತ್ತದೆ. ಬಳಗಾಱಗಣದ ಮಾಹಿತಿ ೧ಎ. ೪.೧೮೦.೧೦೪೮; ೫೧೧.೨೦.೪೭. ೧೦೭೪; ಜೆಬಿಆರ್ಎಎಸ್ ಸಂ. ೧೦. ನಂ. ೮.೧೦೮೭-೮೮ ಮತ್ತು ೧೧೨೧-೨೨. ಕೊಣೂರು (ಬೆಳಗಾವಿ ಜಿ/ಗೋಕಾಕ ತಾ). ಪು. ೨೮೭-೯೧. ಸಾಲು: ೧೯; ರನ್ನ, ಅಜಿತಪುರಾಣಂ (೧೨-೪೪), ೯೯೩; ಸೌ.ಇ.ಇ. ೯-೧.೬೦.೯೩೧; ಸೌ.ಇ.ಇ. ೯-೨.೪೨೪.೧೪೦೧- ಇತ್ಯಾದಿ. ಈ ಬಳಗಾಱಗಣದ ಪ್ರಾಚೀನರೂ ಮುಖ್ಯರೂ ಆಗಿದ್ದ ವರ್ಧಮಾನ ಮುನಿನಾಥರು ಗಂಗಾನ್ವಯಕ್ಕೆ ಗುರುಗಳೆಂಬುದು ನೆನಪಿಡತಕ್ಕ ಮಾತು. ಗಂಗವಂಶದ ಮೂಲಗುರುಗಳು ಹಾಗೂ ಗಂಗರಾಜ್ಯ ಸ್ಥಾಪನಾಚಾರ್ಯರು ಯಾಪನೀಯ ಸಂಘದ ಕ್ರಾಣೂರ್ಗ್ಗಣದ ಸಿಂಹಣಂದಿ ಆಚಾರ್ಯರೆಂದು ಹಲವಾರು ಶಾಸನಗಳಲ್ಲಿದೆ [ಇ.ಆ. ೭.ಪು. ೧೦೭; ಎ.ಕ. ೭-೧ ಶಿವಮೊಗ್ಗ ೪. ೧೧೨೨.ಪು. ೧೦-೧೫; ಅದೇ, ಶಿವಮೊಗ್ಗ-, ೬೧೦೬೦; ಅದೇ,ಶಿವಮೊಗ್ಗೆ ೫೭,೧೧೧೫-೬೧; ನಿದಿಗೆ ಪು. ೫೭-೬೧; ಹೊಂಬುಜ. ೧ ಮತ್ತು ೨, ೧೦೭೭ ದ ನಾಗರಾಜಯ್ಯ, ಹಂಪ: ಸಾಂತರರು-ಒಂದು ಅಧ್ಯಯನ: ೧೯೭೭]. ಸಿಂಹಣಂದಿ ಮುನಿಯ ತರುವಾಯದವರಲ್ಲಿ ವರ್ಧ ಮಾನ ಮುನಿನಾಥರು ಗಂಗರ ಹಿರಿಯ ಗುರುಗಳಾಗಿ ಮಾನ್ಯರಾದರೆಂಬುದನ್ನು ಈ ಶಾಸನ ಸ್ಪಷ್ಟವಾಗಿ ಸಾರಿದೆ. ಅವರ ಶಿಷ್ಯರು ಮಹಾವಾದಿ ವಿದ್ಯಾನಂದ ಸ್ವಾಮಿಗಳು ಮತ್ತು ಅನಂತರದವರು ತಾರ್ಕಿಕ ನೈಪುಣ್ಯದಿಂದ ಪ್ರಸಿದ್ಧರು. ಗಣ್ಡವಿಮುಕ್ತಮುನಿಯು ಕ್ರಿ.ಶ. ೧೦೩೧ ರಲ್ಲಿ ಕೊಪ್ಪಳ ಮಹಾತೀರ್ತ್ಥದಲ್ಲಿ ಸಲ್ಲೇಖನವ್ರತಧಾರಿಯಾಗಿ ಮುಡಿಪಿ ಪಂಡಿತ ಮರಣವನ್ನು ಪಡೆದರು. ಇವರೆಲ್ಲರೂ ಕಲ್ಯಾಣ ಚಾಳುಕ್ಯರ ಆಳ್ವಿಕೆಯಲ್ಲಿ ಖ್ಯಾತ ನಾಮರಾಗಿದ್ದರೆಂಬುದನ್ನು ಪ್ರಾತ್ಯೇಕವಾಗಿ ಎತ್ತಿ ಹೇಳಬೇಕು.

೧೨. ಈ ಶಾಸನದ ಮೊದಲು, ತುದಿ, ನಡುವೆ, ಉದ್ದ, ಅಗಲ-ಎಲ್ಲವೂ ಆವರಿಸಿಕೊಂಡಿರುವುದು ಅಣ್ಣಿಗೆರೆಯ ಅರ್ಹದಾಯತನ. ಅಣ್ಣಿಗೆರೆ ಬಸದಿಯ ವಿಶೇಷತೆ ಹಲವಾರಿವೆ: ೧). ಅದು ಕರ್ನಾಟಕದ ಪ್ರಾಚೀನ ಜಿನಾಲಯಗಳಲ್ಲೊಂದು. ೨) ಅದುಗಂಗರು

ಕಟ್ಟಿಸಿದ್ದು; ಗಂಗ ಪೆರ್ಮಾನಡಿ, ಜಯದುತ್ತರಂಗ, ಇಮ್ಮಡಿ ಬೂತುಗ ಮಾಡಿಸಿದ್ದು ೩) ಈ ಬಸದಿಯನ್ನು ಗಂಗರು ಕಟ್ಟಿಸಿದ್ದು, ಗಂಗರೊಂದಿಗೆ ಅವರ ಎರೆಯಾರಾದ ರಾಷ್ಟ್ರಕೂಟರೂ ಪೊರೆದರು ೪) ಗಂಗ–ರಟ್ಟರ ತರುವಾಯ ಚಾಳುಕ್ಯರು ಪೋಷಿಸಿದರು. ೫)ಚಾಳುಕ್ಯರ ಕಾಲದಲ್ಲಿ ಹಗೆಗಳಾದ ಚೋಳರು ಈ ಬಸದಿಯನ್ನು ಮುಕ್ಕಾಗಿಸಿದರು. ೬) ಖಣ್ಡಗೊಣ್ಡ ಬಸದಿಯನ್ನು ಮತ್ತೆ ಚಾಳುಕ್ಯರು ಸ್ಫುಟಿತ–ಜೀರ್ಣೋದ್ಧಾರ ಮಾಡಿದರು. ೭) ಅನಂತರ ಮಯೂರಪುರವರಾಧೀಶರಾದ ಕತ್ತಲೆಕುಲದ ಮಹಾಸಾಮಂತರು ಆರಾಧಿಸಿದರು ೮) ತರುವಾಯ ಅಣ್ಣಿಗೆರೆ ಧರ್ಮಾಡಳಿತ ಪ್ರದೇಶಕ್ಕೆ **(diocese)** ಒಳಪಟ್ಟ ಊರುಗಳ ಜೈನ ಶ್ರಾವಕ ಸೆಟ್ಟಿಮನೆ ತನಗಳವರು ಸಾಮೂಹಿಕವಾಗಿ ಕೊಡುಗೆಗಳಿಂದ ಬಸದಿಯನ್ನು ಊರ್ಜಿತಗೊಳಿಸಿದರು ೯) ಆ ಮೇಲೆ ವಾಜಿಕುಲದ ರೇಚಣ ದಂಡಾಧಿಪನು ಈ ದೇವಾಲಯಕ್ಕೆ ಪ್ರತಿಬದ್ಧ ವಾದ ಜಿನರಿಗೆ ದತ್ತಿಯಿತ್ತನು. ೧೦) ಹೀಗೆ ಚಕ್ರವತಿಗಳಿಂದ, ಮಹಾಮಂಡಲೇಶರಿಂದ, ಮಹಾಸಾಮಂತರಿಂದ, ಮಹಾಪ್ರಧಾನರಿಂದ, ಮಹಾಪ್ರಜೆಗಳಿಂದ ಒಂದೇ ಸಮನೆ ಪೂಜೆಗೊಳ್ಳುತ್ತ ಸಂತತವಾಗಿ ಬೆಳೆದು ಇಂದಿಗೂ ಉಳಿದು ಬಂದಿರುವ ಭವ್ಯ ಪರಂಪರೆಯ ಜಿನಾಲಯವಿದು. ಏಳು ಬೀಳುಗಳಿರುವ ನಿರಂತರ ಚರಿತ್ರೆಯನ್ನು ಗರ್ಭೀಕರಿಸಿರುವ ಈ ಬಸದಿಯ ವಾಸ್ತು–ಶಿಲ್ಪ ಇಂದಿಗೂ ಮನನೀಯವಾಗಿದೆ. ಬಸದಿಗಳ ವಿನಾಶದ ಸಂದರ್ಭಗಳ ಜತೆಗೇ ಅವುಗಳ ಪುನರ್ ಭರಣ ಪ್ರಕ್ರಿಯೆಯೂ ನಡೆಯುತ್ತಿದ್ದ ಎರಡೂ ರೀತಿಗೆ ಈ ಬಸದಿಯ ರೋಚಕ ಇತಿಹಾಸವೇ ಒಂದು ಜ್ವಲಂತ–ಜೀವಂತ ನಿದರ್ಶನ. ಗಂಗರು, ರಾಷ್ಟ್ರಕೂಟರು ತೋರಿದ ಜೈನನಿಷ್ಠೆಯನ್ನು ಚಾಳುಕ್ಯರೂ ಹೇಗೆ ಮುಂದುವರಿಸಿದರೆಂಬುದನ್ನೂ ಈ ದೇವಾಲಯದ ಕಥೆ ಹೇಳುತ್ತಿದೆ.

೧೩. ಈ ಶಾಸನದಲ್ಲಿ ದೇವಾಲಯಕ್ಕೆ ಒಪ್ಪಿಸಿದ ಹೊಲಮನೆಮತ್ತಿತರ ಕೊಡುಗೆಗಳು ಅಕರ (ಸುಂಕರಹಿತ–ಸರ್ವನಮಸ್ಯ) ವಾಗಿದ್ದುವು–ಎಂದು ಹೇಳುವಾಗ ಕೆಲವು ರೂಢಿಯ ಶಾಸನ ಪರಿಭಾಷೆಯನ್ನು ಬಳಸಿದೆ. ಅರಸರ ಕಾಣಿಕೆ–ಕಾಣ್ಕೆ ಎಂಬುದು ರಾಜರಿಗೆ ಒಪ್ಪಿಸಬೇಕಾದ ನಜರು, ನಜರಾಣೆ [ಎ.ಇ. ೩೭, ೧೫.೧೧೧೪. ಸಾಲು: ೧೯; ಸೌ.ಇ.ಇ. ೯–೧, ೨೬೪. ೧೧೭೪; ಅದೇ,

೨೫೧. ೧೧೪೯]; ಅಱುವಣ ಎಂಬುದೊಂದು ತೆರಿಗೆ [ಸೌ.ಇ.ಇ. ೧೧–೧. ೫೨.೧೦೭ ಲಕ್ಕುಂಡಿ; ಎ.ಇ. ೨೩.೩೦.೧೨೬೫] ; ಉಮ್ಬಳಿ ಎಂಬುದು ಕಂದಾಯ ಕೊಡದೆಯೋ ಅನುಭವಿಸಬಹುದಾದ ಜಹಗೀರುನ್[ಸೌ.ಇ.ಇ. ೧೧–೧. ೪೫.೯೮೦. ಸಾಲು: ೩೬]– ಇದು ಸಂಸ್ಕೃತದ ಉದ್ಬಲಿ ಎಂಬ ಶಬ್ದ ಪ್ರಾಕೃತದಲ್ಲಿ ಉಬ್ಬಲಿ ಎಂದಾಗಿ ಕನ್ನಡಕ್ಕೆ ಬಂದಿದೆ. ಬಿಟ್ಟು–ಬಿರ್ದು ಎಂಬುದು ರಾಜಬೊಕ್ಕಸಕ್ಕೆ ಒಪ್ಪಿಸಬೇಕಾದ ತೆರಿಗೆ, ಇದು ಅತಿಥಿ ಸತ್ಕಾರ ಮಾಡುವವರು ತೆರಬೇಕಾದ ತೆರ [ಹೊಂಬುಜ. ೨.೧೦೭೭. ಸಾಲು: ೧೫೫; ಹೊಂಬುಜ ೬–ಬಿ. ೧೦೮೭; ಬಿಟ್ಮ್ರಣ್ಣ ಎಂಬುದನ್ನೂ ಹೋಲಿಸಿ ನೋಡಬೇಕು– ಎ.ಕ. ೧೪ ತಿರುಮ. ೨೫೩.ಸು. ೮೦೦. ಸಾಲು: ೭]; ಬಿಯ ಎಂಬುದು ಸಂಸ್ಕೃತದ ವ್ಯಯಶಬ್ಧವು ಪ್ರಾಕೃತದಲ್ಲಿ 'ವಿಱ' ಎಂದಾಗಿ ಕನ್ನಡದಲ್ಲಿ ಬಿಯ ಎಂದಾಗಿದೆ. ಇದು ದವಸಧಾನ್ಯ ರೂಪದಲ್ಲಿ ಕೊಡುವ ತೆರಿಗೆ. ಕೆಲವು ಶಾಸನಗಳಲ್ಲಿ ಇದಕ್ಕೆ 'ಬೀಯ' ಎಂಬ ರೂಪವೂ ಬಳಕೆ ಯಾಗಿದೆ [ಹೊಂಬುಜ ೨. ೧೦೭೭. ಸಾಲು: ೧೫೫; ಹೊಂಬುಜ ೬–ಬಿ. ೧೦೮೭. ಸಾಲು: ೨೩]. ಸಮಕಟ್ಟು ಎಂಬುದು ಸಮಾನವಾದ ಭಾಗ. ಭೋಗವಾಡಗೆ ಎಂಬುದು ಅನುಭವಿಸಲು ಕೊಡಬೇಕಾದ ಬಾಡಿಗೆ. ಇಂದಿನ ಬಾಡಿಗೆ ಎಂಬ ಶಬ್ದಕ್ಕೆ ಮೂಲ ಈ ಬಾಡಗೆ ಎಂಬುದು ಕೊಡಬೇಕಾದ ಬಾಡಿಗೆ. ಇಂದಿನ ಬಾಡಿಗೆ ಎಂಬ ಶಬ್ದಕ್ಕೆ ಮೂಲ ಈ ಬಾಡಗೆ ಎಂಬುದು (ಭೋಗ+ಬಾಡಗೆ= ಭೋಗವಾಡಗೆ) ಮತ್ತರು ಎಂಬುದು ನೆಲದಳತೆಯ ಒಂದು ಪ್ರಮಾಣ. ಮತ್ತರ್, ಮತ್ತಲ್, ಮತ್ತ., ಮ–ಎಂಬುದಾಗಿಯೂ ಶಾಸನಗಳಲ್ಲಿ ಮತ್ತರನ್ನು ಸೂಚಿಸಲಾಗಿದೆ. ಒಂದು ಎಕರೆಯಿಂದ ಎಂಟು ಎಕರೆಯವರೆಗೂ ಇದರ ಪ್ರಮಾಣ ಇದೆ [ಇ.ಆ.೧೧, ೭೦. ೫೬೭; ಎ.ಕ.೮, ಸೊರಬ ೮೫.೮೭೬; ಸೌ.ಇ.ಇ.೨೦, ೧೩.೮೭೫. ಸೌದತ್ತಿ; ಹೊಂಬುಜ. ೨೭. ೧೨೮೭. ಸಾಲು: ೧೭–೧೮]. ಗದ್ಯಾಣವು ೩೨ ರಿಂದ ೬೪ ಗುಂಜಿ ತೂಕದ, ಅಥವಾ ಹತ್ತು ಹಣ (ಪಣ) ಬೆಲೆಯ ನಾಣ್ಯ. ಶಾಸನಗಳಲ್ಲಿ ಗದ್ಯಾಣ ಎಂಬುದಕ್ಕೆ ಕೆಲವೊಮ್ಮೆ ಗ ಎಂದಷ್ಟೇ ಸಣ್ಣಿಸಿ ಹೇಳುವುದುಂಟು (ಹೊಂಬುಜ. ೩೧.೧೩೯೦–ಸಾಲು: ೨೦) ಈ ಎಲ್ಲ ಶಬ್ಧಗಳ ಹೆಚಿವಿನ ವಿವರಗಳು 'ಸಾಂತರರು: ಒಂದು ಅಧ್ಯಯನ' ಎಂಬ ಪುಸ್ತಕದಲ್ಲಿದೆ [ನಾಗರಾಜಯ್ಯ, ಹಂಪ: ೧೯೯೭: ೨೮೪ ರಿಂದ ೯೦].

೧೪. ಸಾರಾಂಶ: ಗಾವರವಾಡದ ಶಾಸನವು ಕಲ್ಯಾಣ ಚಾಳುಕ್ಯರ ಕಾಲದ ಒಂದು ಮಹತ್ವದ ಶಾಸನ. ಆ ಕಾಲದ ರಾಜಕೀಯ ಜೀವನ, ಸಾಧನೆ ಮತ್ತು ಧಾರ್ಮಿಕ ಸ್ವರೂಪ ಒಂದು ಸೊಗಸಾದ ಪ್ರತಿಬಿಂಬ ಇದರಲ್ಲಿ ಪ್ರತಿಫಲನವಾಗಿದೆ.